ಇಮಾಜುಗಳನ್ನು ಮಾಡುತ್ತಾ ಒಂದೇ ಮನೆಯಲ್ಲಿ ಅನ್ಯೋನ್ಯವಾಗಿ ವಾಸಿಸುತ್ತಿದ್ದರು.

ಇಮಾಜುಗಳ ತಯಾರಿಕೆಯಲ್ಲಿ ಹೆಸರು, ಹಣ ಸಂಪಾದಿಸಿದ್ದ ಪಿಂಟೊ ಮನೆತನದವರನ್ನು ಶ್ರೀಮಂತರ ಪೈಕಿ ಎಂದೇ ಪರಿಗಣಿಸಲಾಗಿತ್ತು. ಪೋರ್ಟಿಕೊ ಇರುವ ಮನೆಗಳಲ್ಲಿ ವಾಸಿಸುತ್ತಿದ್ದವರನ್ನು ಜನಸಾಮಾನ್ಯರು ಶ್ರೀಮಂತರೆಂದೇ ಭಾವಿಸುತ್ತಿದ್ದರು. ಅದು ನಿಜವೂ ಆಗಿತ್ತು. ಅವರದ್ದು ಪೋರ್ಟಿಕೊ ಮತ್ತು ಆಳುಕಾಳುಗಳಿದ್ದ ದೊಡ್ಡ ಮನೆ.

ಇತ್ತೀಚಿನ ವರ್ಷಗಳಲ್ಲಿ ಅವರ ಅವನತಿ ಶುರುವಾಗಲಾರಂಭಿಸಿತ್ತು. ವ್ಯಾಪಾರ ಕಡಿಮೆಯಾಗಿ ಕೈಯಲ್ಲಿ ದುಡ್ಡು ಓಡಾಡುವುದು ಬಹಳಷ್ಟು ಕಡಿಮೆಯಾಗತೊಡಗಿತು. ಮೂರೊತ್ತಿನ ಊಟಕ್ಕೂ ತ್ರಾಸವಾಗತೊಡಗಿತು. ಜುವಾನ್ನ, ಮನೆಯಲ್ಲೇ ಬೆಳೆದ ಕಾಯಿ–ಪಲ್ಲೆಗಳಿಂದ ಹೇಗೋ ಸಂಸಾರ ತೂಗಿಸುತ್ತಿದ್ದಳು. ಬಸಳೆ ಸೊಪ್ಪಿನ ಒಂದು ಚಪ್ಪರವಿತ್ತು. ವಾರಕ್ಕೆ ಎರಡು ಮೂರು ಬಾರಿ ಅದರದ್ದೇ ಸಾರು ಆಗುತ್ತಿತ್ತು. ಅಲ್ಲಿಲ್ಲಿ ಬಾಳೆ ಬೆಳೆದವರಿಂದ ಬಾಳೆದಿಂಡು ತಂದು ಬೇಯಿಸಿ, ಉಳಿದದ್ದು ಉಪ್ಪಿಗೆ ಹಾಕಿ ಇಟ್ಟರೆ ಬೆಳಗಿನ ಗಂಜಿಗೆ ನಂಚಿಕೊಳ್ಳಲು ಆಗುತ್ತಿತ್ತು. ಇವತ್ತೂ, ಮಣ್ಣು ಹೇರಿಕೊಂಡು ಬಂದ ದಿನ ಜುವಾನ್ನ ಪೊಕು ಮಾಸ್ತರರ ಮನೆಯಿಂದ ಬಾಳೆ ದಿಂಡು ಮತ್ತು ಬಾಳೆಮೊಗ್ಗನ್ನು ತಂದಿದ್ದಳು.

ದಿಂಡನ್ನು ಸಣ್ಣದಾಗಿ ಕತ್ತರಿಸಿ ತೆಂಗಿನ ಕಾಯಿ ತುರಿ, ಎಣ್ಣೆ ಹಾಕಿ ಬೇಯಿಸಿ ಸಂಜೆಯ ಗಂಜಿಗೆ ನೆಂಚಿಕೊಳ್ಳಲು ತಯಾರಿ ನಡೆಸಿದ್ದಳು. ಬಾಳೆಕಾಯಿ ಮೊಗ್ಗಿನ ಚಟ್ನಿಯನ್ನು ನಾಳೆ ಬೆಳಗಿನ ಗಂಜಿ ಊಟಕ್ಕೆಂದು ಅವಳು ಆಗಾಗಲೇ ನಿರ್ಧರಿಸಿದ್ದಳು.

★★★

ಬಪ್ತೀಸ ತನ್ನ ಧರ್ಮಕ್ಷೇತ್ರದ ಪಾದ್ರಿಗಳ ಸಮ್ಮುಖದಲ್ಲಿ ಎರಡೂ ಕೈಗಳನ್ನು ಜೋಡಿಸಿ, ತಲೆ ತಗ್ಗಿಸಿ ವಿನಮ್ರನಾಗಿ ನಿಂತುಕೊಂಡಿದ್ದ. ಅವನ ಎದೆ ಡವಗುಟ್ಟುತ್ತಿತ್ತು. ಧರ್ಮ ಕ್ಷೇತ್ರದಲ್ಲಿ ಸುಂದರವಾದ ಮಜಬೂತು ಚರ್ಚು ಮಾತ್ರವಲ್ಲದೆ, ಅತ್ಯಾಧುನಿಕ ಸಭಾಭವನ, ಶಾಲೆ ಮತ್ತು ಹೈಸ್ಕೂಲು ಇದ್ದವು. ಇತ್ತೀಚೆಗೆ ಧರ್ಮಪ್ರಾಂತ್ಯದ ಧರ್ಮಾಧಿಕಾರಿಗಳ ಒಪ್ಪಿಗೆ ಪಡೆದು ದಾನಿಗಳ ನೆರವಿನಿಂದ ಕಾಲೇಜನ್ನೂ ಕಟ್ಟಿಸಲಾಗಿತ್ತು. ಸರ್ಕಾರದಿಂದ ಏನೂ ನೆರವು ಸಿಗುತ್ತಿಲ್ಲ, ಸಂಸ್ಥೆಗಳನ್ನು ನಡೆಸುವುದು ಕಷ್ಟವಾಗುತ್ತಿದೆ ಎಂದೇ ಪಾದ್ರಿಗಳ ದಿನನಿತ್ಯದ ರಾಗವಾಗಿತ್ತು. ಆದ್ದರಿಂದ ಅಲ್ಲಿ ಶುಲ್ಕ ಮತ್ತು ವಂತಿಗೆ ಕಟ್ಟಲು ಶಕ್ತರಾಗಿರುವವರ ಮಕ್ಕಳಿಗೆ ಮಾತ್ರ ಸೀಟು ಸಿಗುತ್ತಿತ್ತು. ತೋರಿಕೆಗಾಗಿ ಕೆಲವು ಕಡುಬಡವರ ಮಕ್ಕಳಿಗೆ ಉಚಿತ ಸೀಟು ಸಿಗುತ್ತಿತ್ತು. ಅದೂ, ಧರ್ಮಾಧ್ಯಕ್ಷರ ಮತ್ತು ಪ್ರಭಾವಿ ರಾಜಕಾರಣಿಗಳ ಶಿಫಾರಸು ಇದ್ದವರಿಗೆ ಮಾತ್ರ!

ಇಗರ್ಜಿಯ ಆಂಗ್ಲ ಮಾಧ್ಯಮದ ಶಾಲೆಗಳಿಗೆ ಶ್ರೀಮಂತ ಹಿಂದೂ, ಕ್ರಿಶ್ಚಿಯನ್ ಮತ್ತು ಮುಸ್ಲಿಮರ ಮಕ್ಕಳಿಗೆ ಹೇಗಾದರೂ ಸೀಟು ಲಭಿಸುತ್ತಿತ್ತು.

ಈ ಇಗರ್ಜಿಗೆ ಬರುವ ಪಾದರಿಗಳೂ ಕೂಡ ಬುದ್ಧಿವಂತರಾಗಿದ್ದು ಶಾಲೆ ಮತ್ತು ಕಾಲೇಜು ನಿರ್ವಹಣೆಯಲ್ಲಿ ಪ್ರಾವಿಣ್ಯತೆ ಹೊಂದಿದವರಾಗಿರುತ್ತಿದ್ದರು. ಜನರ ಆಧ್ಯಾತ್ಮಿಕ ಅಗತ್ಯಗಳಷ್ಟೇ ಅಲ್ಲದೆ ಪ್ರಾಥಮಿಕ, ಪ್ರೌಢಶಾಲೆ ಮತ್ತು ಕಾಲೇಜನ್ನೂ ನಿರ್ವಹಿಸುವ ಕ್ಷಮತೆ ಹೊಂದಿರಬೇಕಿತ್ತು.

ಇತ್ತೀಚೆಗೆ ಇಮಾಜುಗಳ ವ್ಯಾಪಾರ ಕುಂದಿದ್ದರೂ ಅದರ ಬಿಸಿ ಬಪ್ತೀಸನಷ್ಟು ಅವನ ತಮ್ಮ ಸಿಲಾನಿಗೆ ತಟ್ಟಿರಲಿಲ್ಲ. ಅವನಿಗೆ ಮಕ್ಕಳಿರಲಿಲ್ಲವಾದ್ದರಿಂದ ಅವನಿಗೆ ಖರ್ಚೇ ಇರಲಿಲ್ಲವೆನ್ನಬಹುದಿತ್ತು. ಮೂರೊತ್ತೂ ಗಂಜಿ ಮತ್ತು ಆಗಾಗ ಅನ್ನ ಸಾರಿನಿಂದಷ್ಟೇ ಅವನು ಮತ್ತು ಅವನ ಮಡದಿ ಸೊಭಿನಾ ಖುಷಿಯಾಗಿರುತ್ತಿದ್ದರು. ವರ್ಷಕ್ಕೊಮ್ಮೆ ಕ್ರಿಸ್ಮಸ್ ಹಬ್ಬಕ್ಕೋ, ಇಲ್ಲ ಚರ್ಚ್ ಹಬ್ಬಕ್ಕೋ ಹೊಸ ಬಟ್ಟೆ ತಂದರೆ ಖುಷಿಯಾಗುತ್ತಿತ್ತು. ಇಲ್ಲದಿದ್ದಲ್ಲಿ ಅವರಿಗೇನೂ ನಿರಾಶೆಯಾಗುತ್ತಿರಲಿಲ್ಲ.

ಇಮಾಜುಗಳ ವ್ಯಾಪಾರದ ಕುಸಿತ ಆರ್ಥಿಕವಾಗಿ ಬಪ್ತೀಸನ ಮೇಲೆ ಹೆಚ್ಚು ಪರಿಣಾಮ ಬೀರಿತ್ತು.